5. 1999-2000ನೇ ಸಾಲಿನಲ್ಲಿ ಭಾರತಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಕೊರೆಯಲು ಉದ್ದೇಶಿಸಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1. 927 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ವಿವರ :

1. ಉತ್ತರಹಳ್ಳಿ	258	9. ಬಿನ್ನಿಪೇಟೆ	264
2. ಯಲಹಂಕ	97	10. ಚಾಮರಾಜಪೇಟೆ	3
3. ವರ್ತೂರು	28	11. ಬಸವನಗುಡಿ	44
4. ಶಿವಾಜಿನಗರ	8	12. ಜಯನಗರ	28
5. ಮಲ್ಲೇಶ್ವರಂ	60	13. ಶಾಂತಿನಗರ	18
6. ರಾಜಾಜಿನಗರ	79	14. ಭಾರತೀನಗರ	20
7. ಗಾಂಧೀನಗರ	7	15. ಜಯಮಹಲ್	12
8. ಚಿಕ್ಕ ಪೇಟೆ	1		

2. ಈ ಬಗ್ಗೆ ಒಟ್ಟು 468.63 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

3. ಈಗ ಕೆಟ್ಟಿರುವ ಕೊಳವೆ ಬಾವಿಗಳು ಯಾವುದುಇಲ್ಲ. ಕೊಳವೆ ಬಾವಿಗಳನ್ನು ಆಗಿಂದಾಗ್ಗೆ ರಿಪೇರಿ ಮಾಡಲು ನಾಲ್ಕು ಉಪ ವಿಭಾಗಗಳಿರುತ್ತದೆ. ಅವುಗಳಲ್ಲಿ ವಾಹನ, ಸಾಮಗ್ರಿ ಬಿಡಿ ಭಾಗಗಳ ಸಹಿತ ಮೂರು ರಿಪೇರಿ ಗುಂಪುಗಳಿವೆ. ಇದಲ್ಲದೆ 2000 ಕೊಳವೆ ಬಾವಿಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರಿ ಸಂಸ್ಥೆಯಾದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ರವರಿಗೆ ವಹಿಸಲಾಗಿದೆ. ಕೆಟ್ಟು ಹೋದ ಕೊಳವೆಬಾವಿಗಳನ್ನು ಕಾಲಕಾಲಕ್ಕೆ ಇಲಾಖಾ ವತಿಯಿಂದ ಸರಿಪಡಿಸಲಾಗುತ್ತಿದೆ.

4. ಭಾರತಿ ನಗರ ವಿಧಾನ ಸಭಾ ಕ್ಷೇತ್ರದಲ್ಲಿ 20 ಕೊಳವೆ ಬಾವಿಗಳನ್ನು ಕೊರಿದಿದ್ದು ಅವು ಸಮರ್ಪಕವಾಗಿ ಕೆಲಸ,ಮಾಡುತ್ತಿವೆ.

5. ಬೆಂಗಳೂರು ನಗರದಲ್ಲಿ ಎಲ್ಲಾ ವಿಧಾನ ಸಭಾ ಕ್ಷೇತ್ರಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯ ಪಡೆದು 10 ಕೊಳವೆ ಬಾವಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಕೊರೆಯಲು ಉದ್ದೇಶಿಸಲಾಗಿದೆ.

ಸಚಿವ ಸಂಪುಟದ ವಿದೇಶಿ ಪ್ರವಾಸ

706 (261) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998ನೇ ಜನವರಿಯಿಂದ ಡಿಸೆಂಬರ್ 1998ರವರೆಗೆ ರಾಜ್ಯ ಸಚಿವ ಸಂಪುಟದ ಸದಸ್ಯರು ಕೈಗೊಂಡ ವಿದೇಶ ಪ್ರವಾಸಗಳ ಪೂರ್ಣ ವಿವರ ನೀಡುವುದು.

ಆ) ಇದಕ್ಕಾಗಿ ಖರ್ಚಾದ ಹಣವೆಷ್ಟು ?

ಇ) ಈ ವಿದೇಶಿ ಪ್ರವಾಸದಲ್ಲಿ ಸಚಿವರುಗಳೊಡನೆ ಪ್ರವಾಸ ಮಾಡಿದ ಅಧಿಕಾರಿಗಳೆಷ್ಟು ಹಾಗೂ ಅವರಿಗೆ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

ಈ) ಈ ವಿದೇಶಿ ಪ್ರವಾಸಗಳಿಂದ ರಾಜ್ಯಕ್ಕೆ ಆಗಿರತಕ್ಕ ಅನುಕೂಲಗಳ ಬಗ್ಗೆ ಸರ್ಕಾರ ಶ್ವೇತಪತ್ರವನ್ನು ಹೊರಡಿಸಿದೆಯೇ; ಇಲ್ಲದಿದ್ದಲ್ಲಿ ಎಂದು ಹೊರಡಿಸಲಾಗುವುದು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯ ಮಂತ್ರಿಗಳು) :

ಅ) (ಆ) ಮತ್ತು (ಆ) ಮಾಹಿತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಅಧಿಕಾರಿಗಳ ಸಂಖ್ಯೆ - 17 ಆದ ವೆಚ್ಚ - ರೂ. 22;05;962-00

ಈ) ಈ ಪ್ರಸ್ತಾಪವು ಸರ್ಕಾರದ ಮುಂದೆ ಇರುವುದಿಲ್ಲ.

-:ಅನುಬಂಧ :-

ಕ್ರ. ಸ	ಸಚಿವರ ಹೆಸರು ಹಾಗೂ ಖಾತೆ	ಪ್ರವಾಸ ವಿವರ
1)	ಶ್ರೀ.ಸಿ.ಎಂ. ಉದಾಸಿ ಲೋಕೋಪಯೋಗಿ ಸಚಿವರು	ರಸ್ತೆ ಸ್ಥಿತಿಗತಿ, ನಿರ್ವಹಣೆ, ಯಾಂತ್ರಿಕತೆ ಹಾಗೂ ಸಂಚಾರ ಆಡಳಿತದಲ್ಲಿ ಯು.ಕೆ ಫ್ರಾನ್ಸ್, ಸಿಂಗಪೂರ್ ಮತ್ತು ಮಲೇಶಿಯಾ ದೇಶಗಳು ಸಾಧಿಸಿರುವ ಪ್ರಗತಿ ಬೆಳವಣಿಗೆಯನ್ನು ಅಧ್ಯಯಿಸಲು ದಿನಾಂಕ : 25-05- 1998 ರಿಂದ 06-06- 1998ರವರೆಗೆ ಯು.ಕೆ ಮತ್ತು ಫ್ರಾನ್ಸ್ ದೇಶಗಳಿಗೆ ಹಾಗೂ ದಿನಾಂಕ 22-06- 1998 ರಿಂದ 29-06- 1998ರವರೆಗೆ ಮಲೇಶಿಯಾ ಮತ್ತು ಸಿಂಗಪೂರ್ ದೇಶಗಳಿಗೆ ಭೇಟಿ ನೀಡಿರುತ್ತಾರೆ. ವೆಚ್ಚ ರೂ. 78, 584-00
2)	ಶ್ರೀ ಎಚ್. ಡಿ. ರೇವಣ್ಣ ವಸತಿ ಸಚಿವರು	ವಸತಿ ಕ್ಷೇತ್ರದಲ್ಲಿ ಯು.ಕೆ. ಹಾಲೆಂಡ್, ಡೆನ್ಮಾರ್ಕ್ ಮತ್ತು ಫ್ರಾನ್ಸ್ ದೇಶಗಳು ಮಾಡಿರುವ ಪ್ರಗತಿಯನ್ನು ಅಧ್ಯಯಿಸಲು ಸದರಿ ದೇಶಗಳಿಗೆ ಭೇಟಿ ನೀಡಿದ್ದರು. ಭೇಟಿಗೆ ಆದ ವೆಚ್ಚವನ್ನು ಸಚಿವರೇ ಸ್ವತಃ ಭರಿಸಿರುತ್ತಾರೆ.
3)	ಶ್ರೀ ಜೆ. ಹೆಚ್. ಪಟೇಲ್ ಮುಖ್ಯಮಂತ್ರಿಗಳು	ರಾಜ್ಯದ ಕೈಗಾರಿಕೆಗೆ ಬಂಡವಾಳವನ್ನು ಆಕರ್ಷಿಸಲು ಹಾಗೂ ಅಭಿವೃದ್ಧಿಯ ಇತರೆ ಕ್ಷೇತ್ರಗಳಿಗೆ ವಿದೇಶಿ ಬಂಡವಾಳವನ್ನು ಪಡೆಯುವ ಸಲುವಾಗಿ ಮಾನ್ಯ ಮುಖ್ಯ